**ಓ.ಎಸ್.143/2020** **ಡಿ.ಡಬ್ಲೂಃ 1**

**ಸಾಕ್ಷಿಯನ್ನು ದಿಃ 17.10.2022 ರಂದು ಕರೆಯಿಸಿ ಪ್ರಮಾಣವಚನ ಬೋದಿಸಲಾಯಿತು.**

**<u>ಪಾಟೀಸವಾಲುಃ ವಾದಿಗಳ ಪರ ಶ್ರೀ.ಬಿ.ಎ.ಎಸ್. ವಕೀಲರಿಂದಃ</u>**

ನಾನು ಮರುದೂರು ಹೊಸುರಿನಲ್ಲಿ ವಾಸವಾಗಿದ್ದೇನೆ. ನಾನು 1972 ರಲ್ಲಿ ಜನಿಸಿದ್ದೇನೆ. ನನ್ನ ತಾತನ ಹೆಸರು ತಮ್ಮೇಗೌಡ. ಅಪ್ಪಾಜಿಗೌಡ ಎಂದರೆ ನನ್ನ ತಾತನ ಅಪ್ಪ. ನನ್ನ ತಾತನ ಅಪ್ಪನಿಗೆ ತಮ್ಮೇಗೌಡ ಮತ್ತು ಸೋಮೇಗೌಡರ ಎಂಬ ಇಬ್ಬರು ಮಕ್ಕಳು. ನನ್ನ ತಾತ ತಮ್ಮೇಗೌಡರಿಗೆ ಇಬ್ಬರು ಮಕ್ಕಳು ಅವರುಗಳೆಂದರೆ ಶಿವಣ್ಣೇಗೌಡ ಮತ್ತು ಚಂದ್ರೇಗೌಡ ಅಲಿಯಾಸ್ ಚಂದ್ರಹಾಸ್. ತಮ್ಮೇಗೌಡರ ಹೆಂಡತಿ ಹೆಸರು ಪುಟ್ಟತಾಯಮ್ಮ. ಈ ಪುಟ್ಟತಾಯಮ್ಮನವರ ಮುಖಾಂತರ ಮೇಲೆ ಹೇಳಿದಂತಹ ಶಿವಣ್ಣೇಗೌಡ ಮತ್ತು ಚಂದ್ರೇಗೌಡ ಅಲಿಯಾಸ್ ಚಂದ್ರಹಾಸ್ ಹುಟ್ಟಿದ್ದಾರೆ. ತಮ್ಮೇಗೌಡರ ತಮ್ಮ ಸೋಮೇಗೌಡ. ಸೋಮೇಗೌಡರಿಗೆ ಒಬ್ಬಳೆ ಮಗಳು, ಅವರ ಹೆಸರು ನಾಗಮ್ಮ. ತಮ್ಮೇಗೌಡ, ಸೋಮೆಗೌಡ ಮತ್ತು ನಾಗಮ್ಮ ಈಗ ಯಾರು ಇರುವುದಿಲ್ಲ ಎಲ್ಲಾ ಪೌತಿಯಾಗಿದ್ದಾರೆ. ನನ್ನ ಲಿಖಿತ ಹೇಳಿಕೆಯ ಅಂಶಗಳನ್ನು ತಿಳಿದುಕೊಂಡಿದ್ದೇನೆ. ನನ್ನ ಲಖಿತ ಹೇಳಿಕೆಯಲ್ಲಿ ನನ್ನ ತಾತನ ಹೆಸರು ತಮ್ಮೇಗೌಡ ಮತ್ತು ತಮ್ಮಣ್ಣೇಗೌಡ ಎರಡೂ ಆಗಿರುತ್ತದೆ. ನನ್ನ ತಾತನ ಹೆಸರು ತಮ್ಮೇಗೌಡ ಅಲಿಯಾಸ್ ತಮ್ಮಣ್ಣೇಗೌಡ ಎಂಬ ಬಗ್ಗೆ ಯಾವುದೆ ದಾಖಲೆ ಕೊಟ್ಟಿಲ್ಲ, ಕೊಡಲು ತೊಂದರೆ ಇಲ್ಲ. ಯಾವ ದಾಖಲೆ ಇದೆ ಎಂದರೆ ವಂಶವೃಕ್ಷ ಇದೆ ಎನ್ನುತ್ತಾರೆ ಅದನ್ನು ಹೊರತುಪಡಿಸಿ ಅವರು ಬರೆದಿರುವ ಒಂದು ಪತ್ರ ಇದೆ, ಅದನ್ನು ತಂದು ಇಲ್ಲಿ ಹಾಜರು ಪಡಿಸಬಲ್ಲೆ. ತಮ್ಮೇಗೌಡರ ಹೆಂಡತಿ ಪುಟ್ಟತಾಯಮ್ಮ ಮಕ್ಕಳಿಲ್ಲದೆ ಪೌತಿಯಾಗಿದ್ದಾರೆ ಎಂದರೆ ಸುಳ್ಳು. ಪುಟ್ಟತಾಯಮ್ಮ ನವರು ಮರಣ ಹೊಂದಿದ ನಂತರ ಸುಬ್ಬಮ್ಮ ಎಂಬುವವರನು ತಮ್ಮೇಗೌಡರು ಮದುವೆ ಮಾಡಿಕೊಂಡರು ಎಂದರೆ

ಸುಳ್ಳು. ತಮ್ಮೇಗೌಡರ ಮತ್ತು ಸುಬ್ಬಮ್ಮ ನವರಿಗೆ ತಿಮ್ಮೇಗೌಡ ಎಂಬ ಏಕೈಕ ಮಗನಿದ್ದ ಎಂದರೆ ಸುಳ್ಳು. ಅದೆ ತಿಮ್ಮೇಗೌಡರು ಈ ದಾವಾದ 1 ನೇ ವಾದಿಯ ಗಂಡ ಮತ್ತು 2 ನೇ ವಾದಿಯ ತಂದೆ ಎಂದರೆ ಸುಳ್ಳು. ಸೋಮೇಗೌಡರಿಗೆ ನಾಗಮ್ಮ, ಶಿವಣ್ಣ ಮತ್ತು ಚಂದ್ರೇಗೌಡ ಎಂಬ 3 ಜನ ಮಕ್ಕಳು ಎಂದರೆ ಸುಳ್ಳು. ಶಿವಣ್ಣನವರಿಗೆ 1 ನೇ ಪ್ರತಿವಾದಿ ಹೆಂಡತಿ 2 ರಿಂದ 5 ಅವರು ಅವರ ಮಕ್ಕಳು ಎಂದರೆ ಸರಿ. 6 ನೇ ಪ್ರತಿವಾದಿ ಜಾನಕಮ್ಮ ನವರು ಚಂದ್ರೇಗೌಡರ ಹೆಂಡತಿ ಎಂದರೆ ಸುಳ್ಳು. ಪ್ರತಿವಾದಿ 7 ರಿಂದ 9 ರವರು ಚಂದ್ರೇಗೌಡರ ಮಕ್ಕಳು ಎಂದರೆ ಸರಿ. ಹಾಲಿ ನನ್ನ ತಂದೆ ಚಂದ್ರೇಗೌಡ, ಅವರ ಸಹೋದರ ಶಿವಣ್ಣ ಮತ್ತು ಸಹೋದರಿ ನಾಗಮ್ಮ ಎಲ್ಲರೂ ಪೌತಿಯಾಗಿದ್ದಾರೆ ಎಂದರೆ ಸರಿ. ಪ್ರತಿವಾದಿ 10 ಮತ್ತು 11 ರವರು ನನ್ನ ತಂದೆಯ ಸಹೋದರಿ ನಾಗಮ್ಮನವರ ಮಕ್ಕಳು ಎಂದರೆ ಸರಿ.

1 ನೇ ಪ್ರತಿವಾದಿ ನನ್ನ ದೊಡ್ಡಮ್ಮ ಎಂದರೆ ಸರಿ. ಅವರಿಗೆ ನಮ್ಮ ಕುಟುಂಬದ ಎಲ್ಲಾ ವಿಚಾರಗಳು ಗೊತ್ತು ಎಂದರೆ ಸರಿ. ನಾನು 1972 ರಲ್ಲಿ ಹುಟ್ಟಿರುವುದರಿಂದ ಅದಕ್ಕೂ ಮೊದಲು ನಮ್ಮ ಕುಟುಂಬದಲ್ಲಿ ಏನೇನು ವ್ಯವಹಾರ ಆಗಿದೆ ಎಂದು ಗೊತ್ತಿಲ್ಲ ಎಂದರೆ ಸರಿಯಲ್ಲ. ನನ್ನ ತಾತನ ತಂದೆ ಅಪ್ಪಾಜಿಗೌಡರಿಗೆ ಯಾವ ಯಾವ ಸರ್ವೆ ನಂಬರ್ ನಲ್ಲಿ ಎಷ್ಟೆಷ್ಟು ಆಸ್ತಿ ಇತ್ತು ಎಂದು ಹೇಳಬಲ್ಲೆ. ಸರ್ವೆ ನಂ. 131 ರಲ್ಲಿ ಬಹುಶಃ 9 ಎಕರೆ, 18 ಗುಂಟೆ ಜಮೀನು, ಸರ್ವೆ ನಂ. 132 ರಲ್ಲಿ 9 ಎಕರೆ, 07 ಗುಂಟೆ ಜಮೀನು , ಸರ್ವೆ ನಂ. 113 ರಲ್ಲಿ 1 ಎಕರೆ , 32 ಗುಂಟೆ ಜಮೀನು , ಸರ್ವೆ ನಂ. 133 2 ಎಕರೆ 25 ಗುಂಟೆ ಜಮೀನು, ಸರ್ವೆ ನಂ. 111/1 ಬಿ. 3 ಎಕರೆ , 27 ಗುಂಟೆ ಜಮೀನು, ಸರ್ವೆ ನಂ. 111/2 ಬಿ ನಲ್ಲಿ 4 ಗುಂಟೆ ಜಮೀನು , ಸರ್ವೆ ನಂ. 154/5 ರಲ್ಲಿ 26 ಗುಂಟೆ, ಮತ್ತು ಇನ್ನೊಂದು 20 ಗುಂಟೆ, ಸರ್ವೆ ನಂ. 155/1 ರಲ್ಲಿ 1 ಎಕರೆ ಜಮೀನು, ಸರ್ವೆ ನಂ. 189 ರಲ್ಲಿ 1 ಎಕರೆ 32 ಗುಂಟೆ ಜಮೀನು, ಸರ್ವೆ ನಂ. 112/1 ರಲ್ಲಿ 1 ಎಕರೆ, 04 ಗುಂಟೆ ಜಮೀನು ಇತ್ತು. ಈ ಎಲ್ಲಾ ಜಮೀನುಗಳನ್ನು ತಮ್ಮೇಗೌಡರು ತಮ್ಮ ಮನೆ ಕೆಲಸಕ್ಕೆ ಇದ್ದ

ಸುಬ್ಬಮ್ಮನವರಿಗೆ ತೆಗೆಸಿಕೊಟ್ಟಿದ್ದರು. ಈ ಎಲ್ಲಾ ಆಸ್ತಿಗಳನ್ನು ನನ್ನ ತಾತ ತಮ್ಮೇಗೌಡರ ತಮ್ಮ ಮನೆ ಕೆಲಸಕ್ಕೆ ಇದ್ದ ಸುಬ್ಬಮ್ಮನವರಿಗೆ ತೆಗೆದುಕೊಟ್ಟಿದ್ದರು ಎಂದು ನಾನು ನನ್ನ ಲಿಖಿತ ಹೇಳಿಕೆಯಲ್ಲಿ ಮತ್ತು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಹೇಳಿದ್ದೇನೆ. ತಮ್ಮೇಗೌಡರು ಸುಬ್ಬಮ್ಮನವರಿಗೆ ಜಮೀನು ತೆಗೆದುಕೊಟ್ಟಿದ್ದ ಪತ್ರಗಳನ್ನೆ ನಾನು ಇಲ್ಲಿ ನನ್ನ ಪರ ಹಾಜರು ಪಡಿಸಿದ್ದೇನೆ. ನಾನು ಹಾಜರುಪಡಿಸಿರುವ ಪತ್ರಗಳಲ್ಲಿ ಸುಬ್ಬಮ್ಮನವರ ಗಂಡನ ಹೆಸರು ಏನೇಂದು ಬರಸಿದ್ದಾರೆ ಎಂದು ನನಗೆ ಗೂತ್ತಿಲ್ಲ. ಸುಬ್ಬಮ್ಮ ನವರಿಗೆ ತೆಗೆದುಕೊಟ್ಟಿದ್ದ ಆಸ್ತಿಗಳ ದಾಖಲೆಗಳನ್ನು ನಾನು ಓದಿ ತಿಳಿದುಕೊಂಡಿದ್ದೇನೆ.

1 ನೇ ವಾದಿಯ ಗಂಡ ಮತ್ತು 2 ನೇ ವಾದಿಯ ತಂದೆ ತಿಮ್ಮೇಗೌಡರು ಹೊನಕೆರೆಗೌಡ ರ ಮಗನಾಗಿದ್ದಾರೆ. ಅಪ್ಪಾಜಿಗೌಡರ ಮೊದಲನೆ ಮಗ ತಮ್ಮೇಗೌಡರ ಹೆಂಡತಿ ಪುಟ್ಟತಾಯಮ್ಮ ತೀರಿಕೊಂಡ ನಂತರ ತಮ್ಮೇಗೌಡರು ಸುಬ್ಬಮ್ಮ ನವರನ್ನು ಮದುವೆ ಆದರು ಎಂದರೆ ಸುಳ್ಳು. ಸದರಿ ಸುಬ್ಬಮ್ಮನವರಿಗೆ ತಿಮ್ಮೇಗೌಡ ಒಬ್ಬರೆ ಮಗ ಎಂದರೆ ಸುಳ್ಳು. ಸೋಮೇಗೌಡರಿಗೆ ಶಿವಣ್ಣ, ಚಂದ್ರೇಗೌಡ ಮತ್ತು ನಾಗಮ್ಮ ಎಂಬ ಮೂರು ಜನ ಮಕ್ಕಳು ಎಂದರೆ ಸುಳ್ಳು. ಸದರಿ ಸುಬ್ಬಮ್ಮ ನವರು ಹೊನಕೆರೆಗೌಡರ ಹೆಂಡತಿ ಎಂದು ತೋರಿಸಲು ನಾನು ಯಾವುದೆ ದಾಖಲೆಯನ್ನು ಹಾಜರು ಪಡಿಸಿಲ್ಲ. ಹೊನಕೆರೆಗೌಡರು ನಮ್ಮ ಮರುದೂರು ಹೊಸುರು ಗ್ರಾಮದವರಾಗಿದ್ದಾರೆ. ಅವರ ಕುಟುಂಬದವರೆಲ್ಲಾ ಅಲ್ಲಿ ಇದ್ದಾರೆ ಎಂದರೆ ಸರಿ. ಅವರಿಗೂ ನಮಗೂ ಯಾವುದೆ ದ್ವೇಷ ಇರುವುದಿದಲ. ಸುಬ್ಬಮ್ಮ ಕೆ.ಆರ್. ನಗರ ತಾಲ್ಲೂಕು ಅರ್ಜುನಹಳ್ಳಿಯವರು ಎಂದರೆ ಸರಿ. ಸುಬ್ಬಮ್ಮ ನವರ ತಂದೆಯ ಹೆಸರು ಅಣ್ಣಾಜೀಗೌಡ ಎಂದರೆ ನನಗೆ ಗೊತ್ತಿಲ್ಲ. ಸುಬ್ಬಮ್ಮ ತಂದರಿ ಕೆಂಪಮ್ಮ ನವರನ್ನು ನಾನು ನೋಡಿದ್ದೆ. ಅಣ್ಣಾಜೀಗೌಡರು ಸುಬ್ಬಮ್ಮ ನವರನ್ನು ತಮ್ಮೇಗೌಡರಿಗೂ ಮತ್ತು ಕೆಂಪಮ್ಮನವರನ್ನು ತಿಪ್ಪೂರಿನವರಿಗೂ ಕೊಟ್ಟು ಮದುವೆ ಮಾಡಿದ್ದರು ಎಂದರೆ ಸರಿ. ಅಣ್ಣಾಜೀಗೌಡರಿಗೆ 9 ರಿಂದ 10 ಎಕರೆ ಜಮೀನು ಅವರ ಊರಿನಲ್ಲಿ ಇದೆ ಎಂದರೆ ಸುಳ್ಳು. ಅವರಿಗೆ

ಎಷ್ಟು ಎಕರೆ ಜಮೀನು ಇದೆ ಎಂದು ಕೂಡ ನನಗೆ ಗೊತ್ತಿಲ್ಲ. ಸುಬ್ಬಮ್ಮ ನವರಿಗೆ ಅರ್ಜುನಹಳ್ಳಿಯಲ್ಲಿ ಇರುವ ಆಸ್ತಿಗಳನ್ನು ಅವರ ತಂಗಿಯಾದ ಕೆಂಪಮ್ಮನವರು ನೋಡಿಕೊಳ್ಳುತ್ತಿದ್ದರು, ಸುಬ್ಬಮ್ಮನವರಿಗೆ ಹುಣಸೂರು ತಾಲ್ಲೂಕಿನಲ್ಲಿ ಜಮೀನುಗಳನ್ನು ತೆಗೆದುಕೊಡಬೇಕೆಂದು ಅಂದುಕೊಂಡಿದ್ದರು ಎಂದರೆ ಸುಳ್ಳು. ನಾನು ಹುಟ್ಟುವ ಮುಂಚೆಯೆ ಕೆಲವೊಂದು ಆಸ್ತಿಗಳನ್ನು ಕೆಂಪಮ್ಮನವರು ಅವರ ಅಕ್ಕ ಸುಬ್ಬಮ್ಮನವರ ಮಗ ತಿಮ್ಮೇಗೌಡರಿಗೆ ತೆಗೆದುಕೊಟ್ಟಿದ್ದಾರೆ ಎಂದರೆ ಸುಳ್ಳು.

1 ನೇ ವಾದಿ ಮತ್ತು ತಿಮ್ಮೇಗೌಡರಿಗೂ ಯಾವಾಗ ಮದುವೆ ಆಯಿತು ಎಂದು ನನಗೆ ಗೊತ್ತಿಲ್ಲ. 1 ನೇ ವಾದಿ ಸುಂದರಮ್ಮ ನನ್ನ ತಾಯಿಯ ಸ್ವಂತ ತಂಗಿಯಾಗಿದ್ದಾರೆ. ಸುಂದರಮ್ಮನವರ ಗಂಡನ ತಂದೆ ತಾಯಿ ಹೆಸರು ಸುಬ್ಬಮ್ಮ, ಹೊನಕೆರೆಗೌಡ ಆಗಿದೆ. ನನ್ನ ತಾಯಿಗೆ ಕುಟುಂಬದ ಎಲ್ಲಾ ವಿಚಾರಗಳು ಗೊತ್ತು ಎಂದರೆ ಸರಿ. ಅವರಿಗೆ ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿಯಲು ಯಾವುದೆ ತೊಂದರೆ ಇಲ್ಲ ಎಂದರೆ ಸರಿಯಲ್ಲ, ಅವರಿಗೆ ಏನು ಗೊತ್ತಾಗುವುದಿಲ್ಲ, ವಯಸ್ಸಾಗಿದೆ. 1 ನೇ ವಾದಿ ರಾಜಮ್ಮ ಮತ್ತು ನನ್ನ ತಾಯಿ 6 ನೇ ಪ್ರತಿವಾದಿ ಜಾನಕಮ್ಮ ಇವರು ನ್ಯಾಯಾಲಯಕ್ಕೆ ಬಂದರೆ ಸತ್ಯ ಸಂಗತಿ ಹೊರ ಬರುತ್ತದೆ ಎಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂ. 132/3 ರ ಜಮೀನನ್ನು ತಿಮ್ಮೇಗೌಡರಿಗೆ 1992-93 ರಲ್ಲಿ ಕೊಡಲಾಗಿತ್ತು. ಸದರಿ ಜಮೀನನ್ನು ದಬ್ಬಾಳಿಕೆಯಿಂದ ಪಡೆದುಕೊಂಡಿದ್ದರು, ಪುನಃ ಹೇಳುತ್ತಾರೆ ಅದನ್ನು ನಾವೆಲ್ಲರೂ ಕ್ರಯಕ್ಕೆ ಬರೆದುಕೊಟ್ಟಿದ್ದೇವು ಎಂದು ಹೇಳಿ ಪುನಃ ಅವರೆ ದಬ್ಬಾಳಿಕೆಯಿಂದ ಪಡೆದುಕೊಂಡಿದ್ದರು ಎನ್ನುತ್ತಾರೆ. ಸದರಿ ಜಮೀನಿನ ಖಾತೆಯನ್ನು 1992-93 ರಲ್ಲಿ ದಬ್ಬಾಳಿಕೆಯಿಂದ ಖಾತೆ ಮಾಡಿಕೊಂಡರು ಎಂದು ಹುಣಸೂರು ಉಪವಿಭಾಗಾಧಿಕಾರಿಗೆ 2021 ರಲ್ಲಿ ಅರ್ಜಿ ಕೊಟ್ಟಿದ್ದೇವೆ. ಸದರಿ ಅರ್ಜಿ ಕೊಟ್ಟಿರುವ ದಾಖಲೆ ಇಲ್ಲಿ ಹಾಜರು ಪಡಿಸಿಲ್ಲ. ತಮ್ಮಣ್ಣೇಗೌಡ ಮತ್ತು ಸೋಮೇಗೌಡರು ತೀರಿಕೊಂಡ ಮೇಲೆ 1 ಎಕರೆಯನ್ನು ತಮ್ಮಣ್ಣೇಗೌಡರ ಮಗ

ತಿಮ್ಮೇಗೌಡರಿಗೆ ಕೊಟ್ಟು ಉಳಿಕೆ ಜಮೀನನ್ನು ಶಿವಣ್ಣ ಮತ್ತು ಚಂದ್ರೇಗೌಡರು ತಮ್ಮ ಹೆಸರಿಗೆ ಖಾತೆ ಮಾಡಿಸಿಕೊಂಡರು ಎಂದರೆ ಸುಳ್ಳು. ಶಿವಣ್ಣ ಮತ್ತು ಚಂದ್ರೇಗೌಡರು ಕಾಲವಾದ ನಂತರ ಶಿವಣ್ಣನವರ ಹೆಸರಿನಲ್ಲಿದ್ದ ಆಸ್ತಿಗಳನ್ನು ಅವರ ಹೆಂಡತಿ ಮಕ್ಕಳಿಗೂ, ಚಂದ್ರೇಗೌಡರ ಹೆಸರಿನಲ್ಲಿದ್ದ ಅಸ್ತಿಗಳನ್ನು ಅವರ ಹೆಂಡತಿ ಮಕ್ಕಳಿಗೂ ಪೌತಿ ಖಾತೆ ಮಾಡಿಸಲಾಗಿದೆ ಎಂದರೆ ಸರಿ. ಈ ದಾವೆ ಹಾಕುವ ಪೂರ್ವದಲ್ಲಿ ದಾವಾ ಆಸ್ತಿಗಳಲ್ಲಿ ತಮಗೆ ಭಾಗ ಬೇಕು ಎಂದು ವಾದಿಗಳು ನನ್ನನ್ನು ಮತ್ತು ಇತರೆ ಯವರನ್ನು ಕೇಳಿದ್ದರು ಎಂದರೆ ಸುಳ್ಳು. ಅವರು ತಮ್ಮ ವಕೀಲರ ಮೂಲಕ ನಮಗೆಲ್ಲಾ ನೋಟೀಸು ಕೂಡ ಕೊಡಿಸಿದ್ದರು ಎಂದರೆ ಸುಳ್ಳು. ಅವರ ನೋಟೀಸಿಗೆ ನಾನು ಉತ್ತರ ಕೊಟ್ಟಿದ್ದೇನೆ. ಉತ್ತರದ ನೋಟೀಸನ್ನು ನಾನು ಇಲ್ಲಿ ಹಾಜರು ಪಡಿಸಿದ್ದೇನೆ. ವಾದಿಯವರು ಕೇಳಿದಂತೆ ನಾವು ಹಿಸ್ಸೆ ಕೊಡದದ್ದ ಕಾರಣ ಅವರು ನ್ಯಾಯಾಲಯಕ್ಕೆ ಬಂದು ಈ ದಾವೆ ಹೂಡಿದ್ದಾರೆ ಎಂದರೆ ನಮಗೂ ಅವರಿಗೂ ಸಂಬಂಧ ಇಲ್ಲ ನಾವೇಕೆ ಕೊಡಬೇಕು ಎನ್ನುತ್ತಾರೆ.

**<u>ಪಾಟಿ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇದೆ.,

(ಜೈಬುನ್ನಿಸಾ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.